**ದಿನಾಂಕ 12.10.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್. ವಕೀಲರಿಂದ**

ನಾನು ಎಸ್.ಎಸ್ಎಲ್.ಸಿ ವರೆಗೆ ಓದಿದ್ದೇನೆ. ಯಾವ ದಿನಾಂಕದಂದು ಕ್ರಯ ಪತ್ರ ಆಗಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಕ್ರಯ ಪತ್ರ ಬರೆದುಕೊಟ್ಟಿರುವುದು 3 ಜನ ಅಣ್ಣತಮ್ಮಂದಿರು ಎಂದರೆ ಸರಿ. ನಾನು ಬರೆಸಿಕೊಂಡಿರುವ ಸರ್ವೆ ನಂಬರ್ 34/3 ಅದು ಅವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ನಾನು ಬರೆಸಿಕೊಳ್ಳುವ ಸಮಯದಲ್ಲಿ ಒಟ್ಟು ಕುಟುಂಬದಲ್ಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಶಿವರಾಜುರವರಿಗೆ ಖಾತೆ ಆಗಿತ್ತು ಎಂದು ಹೇಳುತ್ತಾರೆ. ನಾನು ಕ್ರಯ ಪತ್ರ ಮಾಡಿಸಿಕೊಳ್ಳುವ ಪೂರ್ವದಲ್ಲಿ ಖಾತೆ ಪಹಣಿಗಳನ್ನು ಪಡೆದುಕೊಂಡು ನೋಡಿ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಆ ದಾಖಲೆಗಳು ಈಗಲೂ ಮನೆಯಲ್ಲಿ ಇವೆ ಆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇಲ್ಲ. ಈ ಪತ್ರ ಆಗುವ ಪೂರ್ವದಲ್ಲೆ ಈ ದಾವೆಯನ್ನು ವಾದಿ ಸಲ್ಲಿಸಿದರು ಎಂದರೆ ಸರಿಯಲ್ಲ. ಶಿವರಾಜುರವರಿಗೆ ಖಾತೆಯು ಅವರ ಅಣ್ಣತಮ್ಮಂದಿರ ನಡುವೆ ಆದ ವಿಭಾಗ ಪತ್ರದ ಆಧಾರದಲ್ಲಿ ಖಾತೆ ಬಂದಿತ್ತು ನಾನು ಆ ವಿಭಾಗ ಪತ್ರವನ್ನು ಪಡೆದುಕೊಂಡಿರಲಿಲ್ಲ. ನಾನು ಕಂದಾಯ ರಶೀದಿಯನ್ನು ಪಡೆದುಕೊಂಡಿಲ್ಲ. ಉಮೇಶನನ್ನು ಮಹದೇವಯ್ಯ ದತ್ತು ಮಾಡಿಕೊಂಡ ದಾಖಲೆಯನ್ನು ನಾನು ನೋಡಿಲ್ಲ ಸಾಕ್ಷಿ ಮಹದೇವಯ್ಯನವರು ನನ್ನ ದತ್ತು ಮಗ ಎಂದು ಹೇಳುತ್ತಿದ್ದರು ಎಂದು ಹೇಳುತ್ತಾರೆ. ಸೋಮಶೇಖರ ಎಂಬುವವರು ಉಮೇಶರವರನ್ನು ದತ್ತು ಪಡೆದುಕೊಂಡಿದ್ದರು ಎಂದು ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಪ್ರಮಾಣ ಪತ್ರಿಕೆಯನ್ನು ನಾನೇ ಹೇಳಿ ಬರೆಸಿದ್ದೇನೆ. ಮಹದೇವಯ್ಯ ಮತ್ತು ಚಿಕ್ಕಮಲ್ಲಮ್ಮನವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ರಾಣಿ ಎಂಬುವವರ ಮಗ ಕಾರ್ತಿಕ್ ನ್ನು ಚಿಕ್ಕಮಲ್ಲಮ್ಮ ನೊಂದಣಿ ದತ್ತು ಪಡೆದುಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಬರೆಸಿಕೊಂಡಿರುವ ಸ್ವತ್ತಿನ ಮೇಲೆ ವಾದಿಗಳಿಗೆ ಹಿಸ್ಸೆಯ ಹಕ್ಕು ಇತ್ತು ಎಂದರೆ ಸರಿಯಲ್ಲ. ದಾವೆ ದಾಖಲು ಮಾಡಿದ ನಂತರ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಪತ್ರ ಆಗುವ ಸಂದರ್ಭದಲ್ಲಿ ಪ್ರತಿವಾದಿಗಳಿಗೆ ಸಮನ್ಸ್ ಆದೇಶ ಆಗಿತ್ತು ಎಂದರೆ ಸರಿಯಲ್ಲ. ನನಗೆ ಪತ್ರ ಆದ ದಿನ 3 ಜನರಿಗೆ ಕ್ರಯ ಪತ್ರ ಆಗಿದ್ದವು. ಶಿವರಾಜುರವರ ಜೊತೆ ಸೇರಿಕೊಂಡು ವಾದಿಗಳ ಹಿಸ್ಸೆ ಹಕ್ಕು ಕೊಡದೇ ದಾಖಲೆಗಳನ್ನು ಸೃಷ್ಟಿ ಮಾಡಿ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಒರಿಜಿನಲ್ ಕ್ರಯ ಪತ್ರ ಬ್ಯಾಂಕಿನಲ್ಲಿ ಲೋನ್ ಪಡೆದು ಇಟ್ಟಿದ್ದೇನೆ. ವಾದಿಗಳ ಹಿಸ್ಸೆಯ ಹಕ್ಕನ್ನು ನಿರಾಕರಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ನಾನು ಪಡೆದುಕೊಂಡಿರುವ ಆಸ್ತಿಯನ್ನು ಮತ್ತು ಅವರ

ಒಟ್ಟು ಕುಟುಂಬದ ಆಸ್ತಿಯಲ್ಲಿ ಹಿಸ್ಸೆ ಹಕ್ಕು ಇದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**